ಬಂದಿವೆ. ಈಗಾಗಲೇ ಪೋಲೀಸರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಈ ದಿವಸ ಸಾಯಂಕಾಲವೇ ಅವರಿಂದ ಮಾಹಿತಿ ತರಿಸಿಕೊಂಡು, ಸಾಯಂಕಾಲ ಸಿಕ್ಕಿದರೆ ನಾಳೆ ಬೆಳಗ್ಗೆಯಾದರೂ ತಮಗೆ ಕೊಡುತ್ತೇನೆ.

ವಿಷಯ :– ಕರ್ನಾಟಕ ಮೂಲಕ ಕೇರಳ ರಾಜ್ಯವನ್ನು ಪ್ರವೇಶ ಮಾಡಲು ಇರುವ ಎರಡು ರಸ್ತೆಗಳನ್ನು ನಿರ್ಲಕ್ಷ್ಯ ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) :– ವಿರಾಜಪೇಟೆ ಗಡಿ ಭಾಗದಲ್ಲಿದೆ ಎನ್ನವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದು ಕೇರಳ ರಾಜ್ಯದ ಸರಹದ್ದಿನಲ್ಲಿದೆ. ಇವತ್ತು ಕರ್ನಾಟಕದ ಮೂಲಕ ಕೇರಳ ರಾಜ್ಯವನ್ನು ಪ್ರವೇಶ ಮಾಡಬೇಕೆಂದರೆ ಮಾಕೊಡಕು ಮೂಲಕ ತಲಚೇರಿಗೆ, ಕುಟ್ಟಾದ ಮೂಲಕ ಮಾನಂದವಾಡಿಗೆ ಹೋಗುವ ವ್ಯವಸ್ಥೆ ಇದೆ. ಬಹಳಷ್ಟು ವರ್ಷಗಳಿಂದ ಈ ಎರಡೂ ರಸ್ತೆಗಳು ರಾಜ್ಯ ಹೆದ್ದಾರಿಗಳಾಗಿದ್ದು, ಈ ಎರಡೂ ರಸ್ತೆಗಳನ್ನು ಬಹಳಷ್ಟು ನಿರ್ಲಕ್ಷ್ಯ ಮಾಡಿದ್ದಾರೆ. ಇವತ್ತು ಏನಾಗಿದೆ ಎಂದರೆ, ಆ ರಸ್ತೆಗಳ ಉದ್ದ ಸುಮಾರು ಮಾಕುಟದಿಂದ ತಲ್ಲಿಚೆರಿಗೆ ಹೋಗಬೇಕಾದ ರಸ್ತೆಯ ಉದ್ದ 26.1 ಕಿಲೋ ಮೀಟರ್ ಇದೆ. ಮತ್ತೊಂದು ರಸ್ತೆಯಾದ ಕುಟ್ಟದಿಂದ ಮಾನಂದವಾಡಿಗೆ ಹೋಗುವ ರಸ್ತೆಯ ಉದ್ದ ಆನೆ ಚೌಕದ ಗೇಟ್‌ನಿಂದ 54.86 ಕಿಲೋ ಮೀಟರ್ ಇದೆ. ಈ ಎರಡು ರಸ್ತೆ, ರಾಜ್ಯ ಹೆದ್ದಾರಿಗಳನ್ನು ಬಹಳಷ್ಟು ನಿರ್ಲಕ್ಷ ಮಾಡಿರುವುದರಿಂದ ಅಲ್ಲಿ ಪ್ರಯಾಣಿಸ ಬೇಕೆಂದರೆ ತುಂಬ ಕಷ್ಟವಾಗುತ್ತದೆ. ಆ ಪ್ರಯಾಣಿಕರು ಎಷ್ಟರ ಮಟ್ಟಿಗೆ ನರಕಸದೃಸವಾದಂಥ ಪ್ರಯಾಣ ಮಾಡುತ್ತಿದ್ದಾರೆಂದರೆ ಹೇಳತೀರದು. ಸನ್ಮಾನ್ಯ ಯಡಿಯೂರಪ್ಪನವರು ಕೇರಳ ರಾಜ್ಯಕ್ಕೆ ಹೋಗುವಂಥ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದರು. ಅವರು ಅಲ್ಲಿಗೆ ಬಂದಾಗ ಈ ಭಾಗದ ಶಾಸಕರು ಯಾರು ಎಂದು ಕೇಳಿದರು. ಆ ಭಾಗದ ಬಿಜೆಪಿ ಶಾಸಕ ಪ್ರತಿನಿಧಿಯಾಗಿ ನಾನು ಅಲ್ಲಿಯೇ ಇದ್ದೆ. ಆದರೆ ಏನಯ್ಯಾ ಇಷ್ಟೊಂದು ಕೆಟ್ಟದಾಗಿ ಈ ರಸ್ತೆಗಳನ್ನು ಇಟ್ಟಿದ್ದಿಯಾ ಇದನ್ನು ಏನಾದರೂ ಸರಿ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದರು. ಜೊತೆಗೆ ಅವರೇ ಖುದ್ದಾಗಿ ಈ ಬಗ್ಗೆ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದರು. ಪತ್ರ ಬರೆದರೂ ಆ ಪತ್ರಕ್ಕೂ ಕೂಡ ಸರ್ಕಾರ ಇಲ್ಲಿಯವರೆವಿಗೂ ಅದಕ್ಕೆ ಯಾವುದೇ ರೀತಿಯ ಚಿಂತನೆ ಮಾಡಲಿಲ್ಲ ಮತ್ತು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ನನಗೆ ಬಹಳ ನೋವಾಯಿತು. ಅದರ ಜೊತೆಗೆ ಉದಯ ಟಿವಿ ಯವರು ಈ ಎರಡು ರಸ್ತೆಗಳನ್ನು

ಅವರೇ ಖುದ್ದಾಗಿ ರಸ್ತೆಗಳನ್ನು ಪರಿಶೀಲಿನೆ ಮಾಡಿ ಅದರ ಚಿತ್ರವನ್ನು ರಾಜ್ಯದ ಉದ್ದಗಲಕ್ಕೂ ಅದನ್ನು ಬಿತ್ತರಿಸಿದರು. ಪ್ರತಿಯೊಬ್ಬರು ನನ್ನನ್ನು ವಿರಾಜಪೇಟೆಯಲ್ಲಿ ಇಷ್ಟೊಂದು ಕೆಟ್ಟದಾದ ರಸ್ತೆಗಳು ಇವೆಯಲ್ಲವೆ ಇವುಗಳನ್ನು ಸರಿಪಡಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲವೆ, ನೀವು ಶಾಸಕರಾಗಿ ಏನು ಮಾಡುತ್ತಿದ್ದೀರಿ ಎಂದು ಕೇಳುತ್ತಾರೆ. ಅಲ್ಲಿ ಗಡಿದಾಟಿ ಕೇರಳ ರಾಜ್ಯಕ್ಕೆ ಹೋದ ಕೂಡಲೇ ಅಲ್ಲಿ ಉತ್ತಮವಾದ ರಸ್ತೆಗಳು ಇವೆ. ಆ ರಸ್ತೆಗಳಲ್ಲಿ ಪ್ರಯಾಣ ಮಾಡುವವರು, ಕೇರಳದಲ್ಲಿ ಮಾತ್ರ ಅಲ್ಲಿ ಒಳ್ಳೆಯ ರಸ್ತೆಗಳನ್ನು ಇಟ್ಟುಕೊಂಡಿದ್ದಾರೆ, ಈ ಕರ್ನಾಟಕಕ್ಕೆ ಬಂತೆಂದರೆ ಕರ್ನಾಟಕ ರಾಜ್ಯದವರು ಏನು ಮಾಡುತ್ತಿದ್ದಾರೆ ಏಕೆ ಈ ರಸ್ತೆಗಳ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ವಹಿಸಿದ್ದಾರೆಂದು ಒಂದು ರೀತಿಯಲ್ಲಿ ಕೆಟ್ಟದಾಗಿ ನಮ್ಮ ಕರ್ನಾಟಕ ರಾಜ್ಯದ ಆಡಳಿತ ವೈಖರಿಯ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ. ದಯವಿಟ್ಟು ನಾನು ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತಿದ್ದೇನೆ, ಈ ಎರಡು ರಸ್ತೆಗಳನ್ನು ಸರಿಪಡಿಸಬೇಕು ಎಂದರೆ, ಈಗಾಗಲೇ ಪಿಡಬ್ಲ್ಯೂಡಿ ಇಲಾಖೆಯವರು ಸುಮಾರು 17.7 ಕೋಟಿ ರೂಪಾಯಿ ಹಣದ ಅವಶ್ಯಕತೆ ಇದೆ ಈ ಹಣವನ್ನು ಯಾವುದೇ ರೀತಿಯಲ್ಲಿಯಾದರೂ ಮಂಜೂರು ಮಾಡಿ, ಏಕೆಂದರೆ, ಅಲ್ಲಿ ಎರಡು ಸೇತುವೆಗಳನ್ನು ಹೊಸದಾಗಿ ನಿರ್ಮಾಣ ಮಾಡಬೇಕಾಗಿದೆ, 39 ಮೋರಿಗಳನ್ನು ನಿರ್ಮಾಣ ಮಾಡಬೇಕಾಗಿದೆ, ಈ ಒಂದು ಕಾರಣಕ್ಕಾಗಿ ಆದ್ಯತೆ ಕೊಡಿ ಎಂದು ಕೇಳುತ್ತಿದ್ದಾರೆ. ವಿಶೇಷವಾಗಿ ನಾನು ಮಾನ್ಯ ಸಭಾಧ್ಯಕ್ಷರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ತಾವು ಒಮ್ಮೆ ಆ ಒಂದು ರಸ್ತೆಗಳನ್ನು ನೋಡಲಿಕ್ಕಾಗಿ, ಆ ಅಂತರರಾಜ್ಯ ಹೆದ್ದಾರಿಗಳನ್ನು ಈ ರಾಜ್ಯ ಎಷ್ಟರಮಟ್ಟಿಗೆ ಇಟ್ಟಿದೆ ಎಂಬುದನ್ನು ತಾವು ಒಂದು ಸಲ ಅಲ್ಲಿಗೆ ಬಂದು ನೋಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಇದರ ಜೊತೆಗೆ ಸರ್ಕಾರವನ್ನು ನಾನು ಆಗ್ರಹಪಡಿಸುತ್ತಿದ್ದೇನೆ, ಯಾವುದೇ ಕಾರಣಕ್ಕೂ ಈ ರಸ್ತೆಗಳಿಗೆ ಆದ್ಯತೆ ಕೊಟ್ಟು ಈಗಾಗಲೇ ನಾನು ಕೇಳಿರುವಂಥ ಹಣವನ್ನು ಮಂಜೂರು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನಾನು ನೋಡಿದರೆ ಏನು ಪ್ರಯೋಜನ ? ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರನ್ನು ಕರೆದುಕೊಂಡು ಹೋಗಿ ತೋರಿಸಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಇದು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆ ವಿಪರೀತ ಮಳೆ ಬರುವ ಜಿಲ್ಲೆಗಳಲ್ಲಿ

ಈ ರೀತಿಯಾಗಿ ರಸ್ತೆಗಳು ಪದೇ ಪದೇ ಹಾಳಾಗುತ್ತಿವೆ. ಅವುಗಳನ್ನು ದುಸ್ಥಿತಿಯಲ್ಲಿಡುವುದು ಕೂಡ ನಿಜವೆ. ಆದರೆ ಅದಕ್ಕೆ ಹೆಚ್ಚಿನ ಅನುದಾನ ಕೊಡಬೇಕಾಗುತ್ತದೆ. ನಬಾರ್ಡ್ ಮೂಲಕವಾಗಿ ಇದಕ್ಕೆ ಹೆಚ್ಚಿನ ಹಣ ಕೊಡಿಸುವಂಥ ಪ್ರಯತ್ನ ಆಗಬೇಕಾಗುತ್ತದೆ. ಮಾನ್ಯ ಲೋಕೋಪಯೋಗಿ ಸಚಿವರಿಗೆ, ಈ ವಿಷಯವನ್ನು ತಿಳಿಸುತ್ತಾ, ಮಾನ್ಯ ಲೋಕೋಪಯೋಗಿ ಸಚಿವರು ಮಾನ್ಯ ಶಾಸಕರನ್ನು ಕರೆಸಿ ಮಾತನಾಡಿ ನಬಾರ್ಡ್‌ಗಾದರೂ ಕೂಡ ಪ್ರಸ್ತಾಪವನ್ನು ಸಲ್ಲಿಸಬೇಕಾಗುತ್ತದೆ ಅಥವಾ ರಾಜ್ಯ ಹೆದ್ದಾರಿ ಅಭಿವೃದ್ಧಿ ಮಂಡಳಿ ನಮ್ಮದೇನೂ ಇದೆ, ಆ ಪ್ರಾಧಿಕಾರದಿಂದಾದರೂ ಕೂಡ ಕ್ರಮ ಕೈಗೊಳ್ಳುತಕ್ಕಂಥದ್ದರ ಬಗ್ಗೆ ನಾನು ತಮಗೆ ಭರವಸೆಯನ್ನು ಕೊಡುತ್ತೇನೆ.

ವಿಷಯ : ರಾಜ್ಯದಲ್ಲಿ ಗೋವಿನ ಜೋಳ ಮತ್ತು ಈರುಳ್ಳಿ ಬೆಳೆದ ರೈತರಿಗೆ ಹಣ ಪಾವತಿಯಾಗದಿರುವುದರ ಬಗ್ಗೆ.

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೆ, ರಾಜ್ಯಾದ್ಯಂತ ಗೋವಿನ ಜೋಳ ಮತ್ತು ಈರುಳ್ಳಿಯನ್ನು ಖರೀದಿಸುವ ಕೆಲಸ ಫೆಬ್ರುವರಿ 10ಕ್ಕೆ ಬಂದ್ ಆಗಿದೆ. ಅಲ್ಲಿಂದ ಇಲ್ಲಿಯವರೆವಿಗೂ ರೈತರಿಗೆ ಪಾವತಿಯಾಗುವ ಹಣವನ್ನು ಪಾವತಿಸಿಲ್ಲ. ಗದಗ್ ಜಿಲ್ಲೆ ಒಂದರಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಿಂತ ಹೆಚ್ಚಿನ ಬಾಕಿ ಉಳಿದಿದೆ. ರೈತರುಗಳು ಸೊಸೈಟಿಯ ಸಾಲ ತುಂಬಬೇಕಾಗಿರುವುದು ಮಾರ್ಚ್ 31ಕ್ಕೆ ಇರುವುದರಿಂದ ಹಣ ಬಿಡುಗಡೆಯಾಗದೇ ಇರುವುದರಿಂದ ರೈತರಿಗೆ ಕಷ್ಟವಾಗಿದೆ. ಅದಕ್ಕೆ ಅತಿ ಶೀಘ್ರದಲ್ಲಿ ಹಣ ಬಿಡುಗಡೆಯಾಗಬೇಕು. ಎಪಿಎಂಸಿ ಯಾರ್ಡ್‌ನಲ್ಲಿ ಅಕಸ್ಮಾತ್ ದಲ್ಲಾಳಿಗಳು ಖರೀದಿಸಿದರೆ ಹಣವನ್ನು 15 ದಿವಸದೊಳಗೆ ಖರೀದಿಸಿದ ಮಾಲಿಗೆ ಹಣ ಪಾವತಿ ಮಾಡದಿದ್ದರೆ ಅವರಿಗೆ ಶಿಕ್ಷೆ ವಿಧಿಸಬೇಕು ಎನ್ನುವ ಕಾನೂನು ಇರುವಾಗ, ಸರ್ಕಾರವೇ ಸುಮಾರು ಒಂದೂವರೆ ಎರಡು ತಿಂಗಳು ವಿಳಂಬವಾಗಿ ಹಣ ಪಾವತಿ ಮಾಡುವುದು ಇದು ಯಾವ ನ್ಯಾಯ ಎಂಬುದನ್ನು ಸರ್ಕಾರ ಗಮನಿಸಬೇಕಾಗುತ್ತದೆ ಮತ್ತು ಅತಿ ಶೀಘ್ರದಲ್ಲಿ ಹಣ ಪಾವತಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ವರ್ಷ ನಾವು ಆವರ್ತನಿಧಿಯಲ್ಲಿಯೇ ಹೆಚ್ಚಿನ ಹಣವನ್ನು ಆಯವ್ಯಯದಲ್ಲಿ ಕೊಟ್ಟಿದ್ದೇವೆ. ನಾವು ನಿರೀಕ್ಷೆ ಮೀರಿದ್ದಕ್ಕಿಂತ ಹೆಚ್ಚು, ನಾವು